<u>ಸಾಕ್ಷಿಗೆ ದಿನಾಂಕ ***19 -06-2025*** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು : ವಾದಿಯ ಪರ ಶ್ರೀ ಆರ್ ಕೆ ಬಿ ವಕೀಲರಿಂದಃ</u>

ದಾವಾ ಆಸ್ತಿಗಳು ತುರಡಗಿ ಮತ್ತು ಕಟಗೂರು ಗ್ರಾಮದಲ್ಲಿ ಇರುತ್ತವೆ. ದಾವಾ ಆಸ್ತಿಗಳು ಮೂಲತಃ ಹಿರಿಯರಿಂದ ಬಂದಂತಹ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಾವು ನಮ್ಮ ತಂದೆಯವರ ಕಾಲದಿಂದಲೂ ಒಟ್ಟಿಗೆ ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿ. ವಾದಿಯು ನನ್ನ ಚಿಕ್ಕಪ್ಪ. ವಾದಿಗೆ ಶಿವಗಂಗಮ್ಮ ಎನ್ನುವ ಹೆಂಡತಿ ಮತ್ತು ಶಿವಶಂಕರ ಎನ್ನುವ ಮಗ ಇರುತ್ತಾರೆ . 7 ನೇ ಪ್ರತಿವಾದಿಯು ನನ್ನ ಸೋದರತ್ತೆ. 7 ನೇ ಪ್ರತಿವಾದಿಗೆ ನನ್ನ ಅಜ್ಜ ಮೃತರಾದಾಗ ವಾರಸಾ ಮಾಡುವ ಕಾಲಕ್ಕೆ 10 ತೊಲೆ ಬಂಗಾರ ಮತ್ತು ಸರ್ವೆ ನಂ.56/2 ಕ್ಷೇತ್ರ 4 ಎಕರೆ 11 ಗುಂಟ ಇದನ್ನು ಬಿಟ್ಟುಕೊಟ್ಟಿರುತ್ತಾರೆ ಮತ್ತು 7 ನೇ ಪ್ರತಿವಾದಿಯು ಉಳಿದ ಜಮೀನುಗಳಲ್ಲಿ ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆ. ನನ್ನ ತಂದೆ ಮತ್ತು ಚಿಕ್ಕಪ್ಪ ಜೀವಂತ ಇದ್ದಾಗ 2 ನೇ ಪ್ರತಿವಾದಿಯು ಅವರ ಖೊಟ್ಟಿ ಸಹಿಗಳನ್ನು ಮಾಡಿ ಖಾತೆ ಬದಲಾವಣೆಯನ್ನು ಮಾಡಿರುತ್ತಾನೆ ಎಂದರೆ ಸರಿ. ಖಾತೆ ಬದಲಾವಣೆ ಮಾಡಿದ್ದು ವಾದಿಯ ಹಕ್ಕಿಗೆ ಸಂಬಂದಪಟ್ಟಿರುವುದಿಲ್ಲ. 2 ಮತ್ತು 6 ನೇ ಪ್ರತಿವಾದಿಯರು ಮಾಡಿಕೊಂಡಂತಹ ಖಾತೆ ಬದಲಾವಣೆಗಳು ಖೊಟ್ಟಿ ಆಗಿರುತ್ತವೆ. 5 ಮತ್ತು 6 ಪ್ರತಿವಾದಿಯರ ಹೆಸರಿಗೆ ಇರುವ ದಾಖಲೆಗಳು ವಾದಿಯ ಹಕ್ಕಿಗೆ ಬಂಧನಕಾರಿ ಆಗಿರುವುದಿಲ್ಲ ಎಂದರೆ ಸರಿ.

**ಪಾಟೀ ಸವಾಲು :** 1, 2 ಮತ್ತು 5 ನೇ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ ಮತ್ತು ಅವರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು : 7 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಯಿತು. ಅವರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.